30

# ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
# KARNATAKA LEGISLATIVE ASSEMBLY RESEARCH AND REFERENCE BRANCH

## ಪತ್ರಿಕಾ ತುಣುಕುಗಳು
## PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಸಿಎಎ

ಪತ್ರಿಕೆಯ ಹೆಸರು : NAME OF THE NEWS PAPER: ಪ್ರಜಾವಾಣಿ    ದಿನಾಂಕ : DATE 5/2/2020

**ಸಂಕ್ಷಿಪ್ತ ಸುದ್ದಿ**

### 'ಸಿಎಎ ವಿರೋಧಿಗಳ ಗಡಿಪಾರು ಮಾಡಿ'

5-2-20

ಬೆಂಗಳೂರು: ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ವಿರೋಧಿಸಿ ಪ್ರತಿಭಟಿಸುವವರನ್ನು ದೇಶದಿಂದ ಗಡಿಪಾರು ಮಾಡಬೇಕು ಎಂದು ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಹಾಗೂ ಬಜರಂಗದಳದ ಕರ್ನಾಟಕ ದಕ್ಷಿಣ ವಿಭಾಗ ಒತ್ತಾಯಿಸಿವೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬಜರಂಗ ದಳದ ರಾಜ್ಯ ಸಂಯೋಜಕ ಕೆ.ಆರ್.ಸುನೀಲ್, 'ಸಂಸತ್ತು ಅಂಗೀಕರಿಸಿದ ಕಾಯ್ದೆಯನ್ನೇ ವಿರೋಧಿಸುವ ವಿದ್ಯಮಾನ ನಡೆಯುತ್ತಿದೆ. ಇದು, ಸಂವಿಧಾನ ಹಾಗೂ ರಾಷ್ಟ್ರೀಯತೆಗೆ ತೋರುವ ಅಗೌರವ' ಎಂದರು.

'ಕಪಾಲಬೆಟ್ಟದಲ್ಲಿ ಯೇಸು ಪ್ರತಿಮೆ ನಿರ್ಮಾಣ, ಮತಾಂತರಕ್ಕೆ ನಿರ್ಬಂಧಿಸಬೇಕು. ಫೆ. 14ರಂದು ಪ್ರೇಮಿಗಳ ದಿನ ಬದಲು ಹುತಾತ್ಮರ ದಿನ ಆಚರಿಸಬೇಕು' ಎಂದರು..